

## ಮನುಷ್ಯರ ನಡುವಿನ ಒಡನಾಟ ಹೆಚ್ಚಲಿ

ಈ ಹೊಸ ವರ್ಷದಲ್ಲಿ ಸಮಾಜದ ಕುರಿತು ನಮ್ಮ ಆಶಯ ಏನಾಗಿರಬೇಕು? ಎಷ್ಟು ಯೋಚಿಸಿದರೂ ಸುಲಭಕ್ಕೆ ಉತ್ತರ ಸಿಗಲಿಲ್ಲ. ಯಾಕೆಂದರೆ ನಾವು ಒಂದು ಸಮಾಜವಾಗಿ ಆಲೋಚನೆಯನ್ನೇ ಮಾಡುತ್ತಿಲ್ಲ. ಸಮಾಜ ಚೆನ್ನಾಗಿದ್ದರೆ ನಾನೂ ಚೆನ್ನಾಗಿರುತ್ತೇನೆ ಎಂಬ ಆಲೋಚನೆ, ಅವಶ್ಯಕತೆಯೇ ಈಗ ಕಡಿಮೆಯಾಗಿದೆ.

ಮನುಷ್ಯ–ಮನುಷ್ಯನ ನಡುವಿನ ಅವಲಂಬನೆ ತಗ್ಗಿದೆ. ಮನುಷ್ಯರೊಂದಿಗೆ ಒಡನಾಡದೆಯೂ ಬದುಕುವ ಸೌಕರ್ಯಗಳು ಈಗಿವೆ. ಇವೆಲ್ಲವೂ ಪ್ರಗತಿಯ ಹಾದಿಯೇ. ಆದರೆ ಮನುಷ್ಯ–ಮನುಷ್ಯನ ನಡುವೆ ಮಾತುಕತೆಯೇ ಕಡಿಮೆ ಆಗಿದೆ. ಹೀಗಿದ್ದಾಗ ಮನುಷ್ಯರನ್ನು ಅರ್ಥ ಮಾಡಿಕೊಳ್ಳುವ ಸಂದರ್ಭವೂ ಇಲ್ಲದ್ದರಿಂದ ಯಾವುದೇ ವ್ಯಕ್ತಿ ಬಗ್ಗೆ, ಗುಂಪು, ಸಮೂಹದ ಬಗ್ಗೆ ಏನು ಹೇಳಿದರೂ ಸುಲಭವಾಗಿ ನಂಬುತ್ತೇವೆ. ಇದರಿಂದಲೇ ಅನವಶ್ಯಕ ದ್ವೇಷವೂ ಹೆಚ್ಚುತ್ತಿರಬಹುದು. ಈ ನಿಟ್ಟಿನಲ್ಲಿ ಯೋಚಿಸಿದಾಗ, 2024ರಲ್ಲಿ ಮನುಷ್ಯರ–ಮನುಷ್ಯರ ಅವಲಂಬನೆ ಹೆಚ್ಚಾಗಲಿ ಎಂದು ಆಶಿಸುತ್ತೇನೆ. ಈ ಮೂಲಕ ಮನುಷ್ಯರನ್ನು ಅರ್ಥ ಮಾಡಿಕೊಳ್ಳುವ ಪ್ರಯತ್ನವೂ ನಡೆಯುತ್ತದೆ. ಸಮಾಜದಲ್ಲಿ ದ್ವೇಷ ಜಾಸ್ತಿಯಾಗುತ್ತಿದೆ ಎಂಬ ಭಾವನೆಗೆ ಪರಿಹಾರ, ಬಹುಶಃ ಒಬ್ಬರ ಮೇಲೆ ಇನ್ನೊಬ್ಬರು ಅವಲಂಬಿತರಾಗುವುದು. ಆಗ ನಾವೊಂದು ಸಮಾಜ ಎನ್ನುವ ಕಲ್ಪನೆ ಬರಬಹುದು.

**-ಸಂಪತ್ ಸಿರಿಮನೆ,** ಕಥೆಗಾರ - ಚಲನಚಿತ್ರ ಲೇಖಕ

ಉಗ್ರವಾಗಿ ಮಾಡಿದ ಹಾಗೆ. ಡಯಟ್ ಎಂದು ಐಸ್ಕ್ರೀಮು ಬಿಟ್ಟವರು ಆ ಗಡಿ ದಾಟಿದ್ದೇ ದೊಡ್ಡದೊಂದು ಡಬರಿ ಐಸ್ಕ್ರೀಮನ್ನು ಕರಗಿಸಿ ಬಾಯಲ್ಲಿ ಸುರುವಿಕೊಂಡ ಹಾಗೆ.

ನಮ್ಮ ಈ ದಿನಮಾನವನ್ನು ಕೋವಿಡ್ ಮುನ್ನ ಮತ್ತು ಕೋವಿಡ್ ನಂತರದ ಕಾಲಘಟ್ಟಗಳಾಗಿ ಸುಲಭವಾಗಿ ವಿಭಜಿಸಬಹುದು. ದಿನ ಬೆಳಗಾಗುವ ಹೊತ್ತಿಗೆ ಜಗತ್ತೇ ಬದಲಾಗಿಬಿಟ್ಟಂತೆ ಕೋವಿಡ್ ಕಾಲ ನಮ್ಮ ನಂಬಿಕೆಗಳನ್ನು ಆಳದಿಂದ ಅಲ್ಲಾಡಿಸಿಬಿಟ್ಟಿತು. ಜೀವನವೆಲ್ಲ ಕೇಳದ ಎಷ್ಟೊಂದು ಶಬ್ದಗಳನ್ನು ಒಂದೇ ರಾತ್ರಿಯಲ್ಲಿ ಕೇಳಬೇಕಾಯಿತು. ಮುಟ್ಟುವುದು ಹೋಗಲಿ, ಪರಸ್ಪರ ಕಣ್ಣಲ್ಲಿ ಕಣ್ಣಿಟ್ಟು ನೋಡುವುದನ್ನೂ ತಪ್ಪಿಸಬೇಕಾಯಿತು. ದಿನಸಿ, ಹಾಲು, ತರಕಾರಿಗಳನ್ನು ಕೂಡಿಟ್ಟು, ಅದು ಕೆಟ್ಟು ಹೋದ ಮೇಲೆ ಪಶ್ಚಾತ್ತಾಪದಿಂದ ಕಸಕ್ಕೆ ಚೆಲ್ಲಬೇಕಾಯಿತು. ನಮ್ಮ ಒಳಮನಸ್ಸಿನ ಹೊದರಿನಲ್ಲಿ ಹುದುಗಿದ್ದ ಅಪನಂಬಿಕೆ, ಅಸಹಾಯಕತೆ, ಅಸೂಕ್ಷ್ಮಗಳೆಲ್ಲ ಕೊಳದಿಂದ ಕಲ್ಮಶ ಎದ್ದು ಬಂದ ಹಾಗೆ ಎದ್ದು ಬಂದವು.

ಹೊಸ ವರ್ಷದಲ್ಲೂ ಈ ರಿಂಗಣಗಳು ಹಾಗೆಯೇ ಉಳಿಯಲಿವೆ. ಹೊಸ ಅಜ್ಞಾತ ಸುಳಿಗಳೂ ಸೇರಿಕೊಳ್ಳಲಿವೆ. ಆದರೆ ದುಗುಡಗಳಿಗೆ ಮುಲಾಮು ಹಚ್ಚುವಂತೆ ಪರಿಹಾರಗಳೂ ನಾಗರಿಕ ಸಮಾಜದ ಒಳಗೇ ಹುಟ್ಟಿಕೊಳ್ಳುತ್ತವೇನೋ. ನ್ಯೂಯಾರ್ಕಿನ ಹೃದಯ ಭಾಗದಲ್ಲಿರುವ ಮ್ಯಾನ್ ಹ್ಯಾಟನ್ ಪ್ರದೇಶದಲ್ಲಿ ಖಾಲಿ ಬಿದ್ದ ಆಫೀಸುಗಳನ್ನೆಲ್ಲ ಈಗ ಕೈಗೆಟಕುವ ದರದಲ್ಲಿ ದೊರಕುವ ವಸತಿ ಸಮುಚ್ಚಯಗಳನ್ನಾಗಿ ಪರಿವರ್ತಿಸುತ್ತಿದ್ದಾರಂತೆ. ಹಾಗೆ.

### ಎದೆ ಬಗೆದಿಟ್ಟಿರುವ ಯುದ್ಧ

ಒಳಗಿನ ಯುದ್ಧ ದೊಡ್ಡದೋ? ಹೊರಗಿನದೋ? ಈ ವರ್ಷವಿಡೀ ಮಾರಣಹೋಮ ಕಂಡದ್ದಾಯಿತು. ಈಗಲೂ ಮುಂದುವರೆದಿರುವ ಇಸ್ರೇಲ್–ಹಮಾಸ್, ರಷ್ಯಾ–ಉಕ್ರೇನ್‌ಗಳಲ್ಲಿ ನಡೆಯುತ್ತಿರುವ ಬಲಿಗಳೆಲ್ಲ ನಮ್ಮೆಲ್ಲರನ್ನೂ ಅವರ ಪರವೋ ಇವರ ಪರವೋ ಮಾಡಿಬಿಟ್ಟಿದೆ. ಅದ್ಹೇಗೋ ಗೊತ್ತಿದ್ದೋ ಗೊತ್ತಿಲ್ಲದೆಯೋ ಬಾಂಬ್ ದಾಳಿಯಿಂದ ಮೃತಪಟ್ಟ ಮಗುವಿನ ಪಾಡಿನಲ್ಲಿ ನಮ್ಮೆಲ್ಲರ ಪಾಲೂ ಇದೆ ಎಂದೇ ಅನ್ನಿಸುವುದು. ಯಾವೊಂದು ಪಂಗಡದವರ ಪರವಾಗಿಯೂ ಇಲ್ಲದೇ ಮನುಷ್ಯತ್ವದ ಪರ ಎಂಬ ನಿಲುವುಳ್ಳವರನ್ನು ಆಷಾಢಭೂತಿಗಳ ಸಾಲಿಗೆ ಸೇರಿಸಲಾಗುತ್ತಿದೆ.

ಈ ಮೇಲೆ ಹೇಳಿರುವ ಎರಡು ಯುದ್ಧಗಳು ಜಗತ್ತಿನಲ್ಲಿ ಎಲ್ಲ ಪತ್ರಿಕೆಗಳೂ ಬಿತ್ತರಿಸಿದ ಗಾಯಗಳಾದವು. ಆದರೆ ಹೆಚ್ಚೇನೂ ಸುದ್ದಿಯಾಗದ ಸಶಸ್ತ್ರ ಸಂಘರ್ಷಗಳು ಸೈಪ್ರಸ್, ಈಜಿಪ್ಟ್, ಇರಾಕ್, ಲಿಬಿಯಾ, ಮೊರಕ್ಕೋ, ಯೆಮೆನ್, ಸಿರಿಯಾ ಪ್ರದೇಶಗಳುದ್ದಕ್ಕೂ ನಡೆಯುತ್ತಿವೆ. ಎದೆ ಬಗೆದಿಟ್ಟ ಮೇಲೆಯೂ ಉಳಿವ ಗ್ರಾಸ ಏನು ಎಂಬುದಕ್ಕೆ ಉತ್ತರ ಕಂಡುಕೊಳ್ಳಲು ಸೋಲುತ್ತಿವೆ.

### ಪರಿಸರದ ಪಾಡು

ಎರಡು ವಾರದ ಹಿಂದೆ ದುಬೈನಲ್ಲಿ ವಿಶ್ವಸಂಸ್ಥೆಯ ‘ಕಾಪ್–28’ ಪರಿಸರ ಸಮ್ಮೇಳನ ನಡೆಯಿತು. ಒಂದು ಅಧ್ಯಯನದ ಪ್ರಕಾರ 2100ರ ವೇಳೆಗೆ ಜಾಗತಿಕ ತಾಪಮಾನವು ಕೈಗಾರಿಕಾ ಯುಗದ ಮೊದಲಿದ್ದುದಕ್ಕಿಂತ 1.5 ಡಿಗ್ರಿ ಸೆಲ್ಷಿಯಸ್‌ನಷ್ಟು ಏರಿಕೆಯಾಗಿರುತ್ತದಂತೆ. ತಾಪಮಾನವನ್ನು ಆ ಮಿತಿಯ ಒಳಗಿರುವಂತೆ ನೋಡಿಕೊಳ್ಳಲು ಹಲವಾರು ಕ್ರಮಗಳನ್ನು ಈ ಸಮ್ಮೇಳನದಲ್ಲಿ ಪಟ್ಟಿ ಮಾಡಲಾಗಿದೆ. ಈ ಎಲ್ಲ ಭರವಸೆಗಳು ಅನುಷ್ಠಾನಕ್ಕೆ ಬರುವುದನ್ನು ಹೊಸ ವರ್ಷದಲ್ಲಿ ಕಾಣುವುದಿದೆ.

### ಅಧಿಕ ವರ್ಷ

2024 ಲೀಪ್ ಇಯರ್. ಅಂದರೆ ಅಧಿಕ ವರ್ಷ. ಭಾರತ ಮತ್ತು ಅಮೆರಿಕ ಎರಡೂ ದೇಶಗಳಲ್ಲಿ ನಿರ್ಣಾಯಕ ಚುನಾವಣೆಗಳು ನಡೆಯುವ ವರ್ಷ. ಎರಡೂ ದೇಶಗಳ ಸರ್ವೋಚ್ಚ ನ್ಯಾಯಾಲಯಗಳು ಹಲವು ಮುಖ್ಯ ತೀರ್ಪುಗಳನ್ನು ಹೊರಡಿಸುವ ಸಂವತ್ಸರ. ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಮಾನವ ಲೋಕ ಇನ್ನೂ ಎರಡೆರಡು ಹೆಜ್ಜೆ ಮುಂದೆ ಸಾಗುವ ಕಾಲ. ಕ್ರೀಡಾಪಟುಗಳು ಹೊಸ ದಾಖಲೆಗಳನ್ನು ಕಟ್ಟುವ, ಕೆಡವುವ, ಸಂಭ್ರಮಿಸುವ ಸಮಯ. ಒಂದಿಷ್ಟು ಕ್ಲಾಸಿಕ್ ಪುಸ್ತಕಗಳು, ಸಿನಿಮಾಗಳು ಕಾಪಿರೈಟ್ ಕಳೆದುಕೊಂಡು ಸಾರ್ವಜನಿಕ ಆಸಕ್ತಿಗೆ ಸರಾಗವಾಗಿ ಮೈಯೊಡ್ಡಿಕೊಳ್ಳುವ ಜಾಗ. ಜೊತೆಗೆ ಹೊಸ ಗ್ರಹಣಗಳು ಹಿಡಿಯುವ ತಾಣವೂ.

ಮಕ್ಕಳು, ವಯಸ್ಕರು ಎನ್ನದೇ ಅಂತರ್ಜಾಲವೆಂಬ ಮಾಂತ್ರಿಕನ ಮಾಯಾಜಾಲಕ್ಕೆ ಸಿಕ್ಕಿ ತತ್ತರಿಸುತ್ತಿರುವಾಗ ನಮ್ಮನ್ನು ಯಾವತ್ತೂ ಪೊರೆಯುವ ಸಮೃದ್ಧ ಒಳ ಜಗತ್ತೊಂದನ್ನು ಕಟ್ಟಿಕೊಳ್ಳುವುದು ಎಲ್ಲರ ಮನಸ್ಸಿನ ಆರೋಗ್ಯವನ್ನೂ ಕಾಪಾಡುವ ಸಂಜೀವಿನಿ. ಕಲೆಗೆ ಆ ಶಕ್ತಿಯಿದೆ. ವಿಜ್ಞಾನಕ್ಕೂ. ಅದು ನಮ್ಮೆಲ್ಲರ ಅರಿವಿನಲ್ಲಿ ಬೆಳೆಯಬೇಕು ಎನ್ನುವುದೇ ಹೊಸ ವರುಷದ ಈ ಕ್ಷಣದ ಅಭೀಪ್ಸೆಯಾಗಿ ನಮ್ಮನ್ನು ಕಾಪಾಡಲಿ. ಅದಕ್ಕೊಂದು ಧ್ಯಾನದ ಅವಶ್ಯಕತೆಯಿದೆ. ಧ್ಯಾನವನ್ನು ಈಗಷ್ಟೇ ಉದ್ಘಾಟನೆಗೊಂಡ ಸ್ವರವೇದ ಮಹಾಮಂದಿರದಲ್ಲೇ ಮಾಡಬೇಕೆಂದು ಇಲ್ಲವಲ್ಲ. ಇಪ್ಪತ್ತು ಸಾವಿರ ಜನ ಒಟ್ಟಿಗೆ ಕುಳಿತರೆ ಅಲ್ಲಿ ಧ್ಯಾನ ಸಾಧ್ಯವೇ? ಮನಸ್ಸಿನ ಧ್ಯಾನ? ಆ ಪ್ರಶ್ನೆಗೆ ಉತ್ತರ ದೊರಕಿಸಿಕೊಂಡರೆ ಹೊಸ ವರ್ಷ ತೆಗೆದುಕೊಳ್ಳಬೇಕಾದ ಮಹತ್ವದ ನಿರ್ಧಾರಗಳ ಮೇಲೆ ನಮ್ಮ ದೃಷ್ಟಿ ನಿಚ್ಚಳವಾದೀತು.

ಏನೇ ಆಕಾಂಕ್ಷೆಗಳಿದ್ದರೂ, ಹೊಸ ವರ್ಷ ಹೊಸ್ತಿಲಲ್ಲಿ ಬಂದು ನಿಂತಾಗ ಒಂದು ಅಪರಿಚಿತ ವಾಸನೆಯನ್ನು ಹೊತ್ತು ತರುತ್ತದೆ. ಒಂದು ಗೂಢವನ್ನೂ. ಏನೂ ಆಗದೇ ಇರಬಹುದು, ಆದರೆ ಏನೇನೋ ಆಗಿಯೂ ಬಿಡಬಹುದು ಎನ್ನುವಂಥ ಸ್ವಚ್ಛಂದವಿದೆ ಆ ಗಳಿಗೆಯಲ್ಲಿ. ಒಂದು ಸೌಂದರ್ಯವಿದೆ. ಜೊತೆಗೆ ಒಂದು ಅನಾಮಿಕತೆಯೂ ಇದೆ. ಮುಗಿದುಹೋಗುವ ದಾರಿಗಳಿವೆ. ಕಾರ್ತಿಕ ಮಾಸದಲ್ಲಿ ಚೈತ್ರ ಬಂದ ಹಾಗೆ ಒಂದು ಅಸಂಗತತೆ ಇದೆ. ‘ಹೊಸ ವರ್ಷ ಅಂದರೆ ಗಡಿಯಾರ ಏನಮ್ಮಾ? ಅದು ಯಾವಾಗ್ಲೂ ನಡಿಯುತ್ತಿರುತ್ತಲ್ಲಮ್ಮಾ...’ ಎಂದು ನಿರುಮ್ಮಳ ನಿದಿರೆಗೆ ಜಾರುವ ಪುಟ್ಟಿಯ ಒಳಗಿನ ಏಕಾಂತಕ್ಕೆ ಅದು ಭಂಗ ತರದಿರಲಿ.

ಪ್ರತಿಕ್ರಿಯಿಸಿ: feedback@sudha.co.in